


ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಯಲ್ಲಿ ಚಿನ್ನದ ಅಂಬಾರಿಯನ್ನು ಹೊತ್ತ ಅರ್ಜುನ ಹೆಸರಿನ ಆನೆ ಚಿತ್ರ: ಬಿ.ಆರ್. ಸವಿತಾ

ಪಡೆದಿರುವುದರಿಂದಲೇ ನೀನು ದುರ್ಗಾ ಎಂದು ಜನರಲ್ಲಿ ಪ್ರಸಿದ್ಧಳಾಗಿರುವೆ...'

ಮೇಲಿನಂತೆ ಧರ್ಮರಾಯನು ಪ್ರಾರ್ಥಿಸುವಾಗಲೇ ಆಕೆ ಪ್ರತ್ಯಕ್ಷಳಾಗಿ ಪಾಂಡವರೆಲ್ಲರ ರಕ್ಷಣಾ ಭಾರವನ್ನು ತಾನೇ ವಹಿಸಿಕೊಂಡು ಅಂತರ್ಧಾನವಾದಳಂತೆ. ವಿರಾಟಪರ್ವದ ಕೊನೆಯ ಭಾಗದಲ್ಲಿ ಪಾಂಡವರ ಇರವನ್ನು ಪತ್ತೆ ಹಚ್ಚುವ ಸಲುವಾಗಿ ದುರ್ಯೋಧನನು ವಿರಾಟನ ಗೋವುಗಳನ್ನು ಅಪಹರಿಸಿದಾಗ, ಬೃಹನ್ನಳೆಯ ವೇಷದ ಅರ್ಜುನನು ಉತ್ತರಕುಮಾರನೊಡನೆ ಯುದ್ಧಕ್ಕೆ ಬರುವಲ್ಲಿ ಶಮೀ ವೃಕ್ಷದ ಬಳಿಗೆ ಬಂದು ಗಾಂಡೀವವನ್ನೆತ್ತಿಕೊಳ್ಳುವುದಲ್ಲದೆ ಅವನೊಬ್ಬನೇ ಕುರು ಸೈನ್ಯವನ್ನು ಎದುರಿಸುತ್ತಾನೆ. ಅಂದರೆ ಅರಮನೆಗಳಿಗೆ ಇಂತಹ ಸಾಹಸಕಥನ ಸಂಗತಿ ಅತ್ಯಗತ್ಯವೆನಿಸಿದವು.

ಕುರುಕ್ಷೇತ್ರದಂಥ ಮಹಾಯುದ್ಧವನ್ನು ಗೆಲ್ಲುವ ಪಾಂಡವರಿಗೂ, ಅವರು ಅಡಗಿಸಿಟ್ಟ ಮಹಾ ಆಯುಧಗಳಿಗೂ, ಪ್ರಾರ್ಥನೆಗೂ, ವಹ್ನಿ ವೃಕ್ಷಕ್ಕೂ ಕಥನ ಸಂಬಂಧವುಂಟಾಗಿ ಇದು ಎಲ್ಲಾ ಶತಮಾನಗಳ ಒಂದು ಆರಾಧನೆ, ಆಚರಣೆಯಾಗಿ, ಜೊತೆಗೆ ಯಾವುದನ್ನೂ ಗೆಲ್ಲುವ ಪ್ರಾರ್ಥನೆಯಾಗಿ ಬೆಳೆದು ಬಂದುಬಿಟ್ಟಿದೆ. ಇಲ್ಲಿಯೇ ನಾವು ಗಮನಿಸಬೇಕಾದುದೆಂದರೆ — ರಾಮಾಯಣ, ಮಹಾಭಾರತದ ಎಲ್ಲ ಸಂಗತಿಗಳೂ ಭಾರತೀಯರಿಗೆ ಪರಮ ಪವಿತ್ರವಾಗಿ ಬಿಟ್ಟಿದೆ. ರಾಮನು ಎಲ್ಲಿಯೋ ಬಾಣವನ್ನು ಹೊಡೆದು ನೀರು ಚಿಮ್ಮುವಂತೆ ಮಾಡಿದ ಎಂಬ ಐತಿಹ್ಯದ ಹಿನ್ನೆಲೆಯಲ್ಲಿ ಅದು ರಾಮತೀರ್ಥವಾಗಿಬಿಡುತ್ತದೆ. ಭೀಮ–ಹಿಡಿಂಬೆಯರು ಒಂದು ದಿನ ಗುಹೆಯಲ್ಲಿ ತಂಗಿದ್ದರು ಎಂಬ ಕಥೆ, ಇಂದಿಗೂ ವಿವಾಹವಾದವರು ಅಲ್ಲಿಗೆ ಯಾತ್ರೆಯಂತೆ ಹೋಗಿ 'ಮುಂದೆ ತಮಗೆ ಶಕ್ತಿಶಾಲಿ ಸುಪುತ್ರ ಜನಿಸಲಿ' ಎಂದು ಹರಕೆ ಕಟ್ಟಿಕೊಳ್ಳುವ ಸ್ಥಳವಾಗಿಬಿಡುತ್ತದೆ. ಈ ಅರ್ಥದಲ್ಲಿ ಧರ್ಮರಾಯಾದಿಗಳು ಆಯುಧಗಳನ್ನು ಅಡಗಿಸಿಟ್ಟ ಶಮೀವೃಕ್ಷ ಮತ್ತು ದುರ್ಗೆಯ ಪ್ರಾರ್ಥನೆ, ಶತಮಾನಗಳಲ್ಲಿ ರಾಜಮಹಾರಾಜರಿಗೆ ಶಕ್ತಿ ಸ್ಥಳವಾಗಿ ಪರಿವರ್ತನೆಯಾಗಿಬಿಟ್ಟದ್ದರಲ್ಲಿ ಆಶ್ಚರ್ಯವಿಲ್ಲ.

ಮಹಾಭಾರತದ ನಂತರ ದುರ್ಗಾದೇವತೆಯ ಇನ್ನಿತರ ಸಂಗತಿಗಳು ವರಾಹ ಪುರಾಣ, ಬ್ರಹ್ಮಾಂಡ ಪುರಾಣ, ಸ್ಕಂದ ಪುರಾಣ, ಮಾರ್ಕಂಡೇಯ ಪುರಾಣ, ದೇವಿ ಭಾಗವತಗಳಲ್ಲಿಯೂ ಇದ್ದು ಏಳನೆಯ ಶತಮಾನದ ಹೊತ್ತಿಗೆ ಭಾರತದಾದ್ಯಂತ ಶಿಲ್ಪ ಸ್ವರೂಪಕ್ಕೆ ಬಂದು ಆಕೆ ಪೂರ್ಣ ಸ್ವರೂಪದಲ್ಲಿ ಆರಾಧನೆಯ ದೇವತೆಯಾಗಿಬಿಟ್ಟಳು. ಉತ್ತರ ಭಾರತದಲ್ಲಿ ಗುಪ್ತರ ಕಾಲಕ್ಕೆ ದುರ್ಗೆಯು ಮೂರ್ತಿಸ್ವರೂಪಿಣಿಯಾಗಿ ಕಂಡುಬಂದರೆ, ಇತ್ತ ದಕ್ಷಿಣ ಭಾರತದ ಬಾದಾಮಿಯಲ್ಲೂ, ತಮಿಳುನಾಡಿನ ಮಹಾಬಲಿಪುರಂನಲ್ಲೂ ದುರ್ಗೆ ಕಾಣಿಸಿಕೊಂಡಳು. ಆಮೇಲೆ ಒಂಬತ್ತು, ಹತ್ತನೇ ಶತಮಾನಗಳಲ್ಲಿಯೂ ಭಾರತದಾದ್ಯಂತ ಈ ಶಕ್ತಿದೇವತೆಯ ಆರಾಧನೆ ಬೆಳೆದುಬಂತು. ಜನಪದರ ಮಾತೃದೇವತೆಯ ಆರಾಧನೆ ಹೇಗೆ ವ್ಯವಸಾಯ ಸಂಬಂಧದಲ್ಲಿ ಪ್ರಾಚೀನವೋ ಹಾಗೆಯೇ ರಾಜಮಹಾರಾಜರಲ್ಲೂ ಇದರ ಆಚರಣೆಗಳು ಯುದ್ಧ, ಸೈನ್ಯ ಮತ್ತು ಅವರ ಜಯಾಪಜಯಗಳಲ್ಲಿ ಸೇರಿಕೊಂಡು ಬಂದವು.

* * *

ಸಾಮಾನ್ಯವಾಗಿ ಜನಪದರ ಹಬ್ಬಗಳು ಪ್ರಾಕೃತಿಕವಾದವುಗಳು. ವರ್ಷದ ಆರಂಭದಲ್ಲಿ ಬರುವ ಗೌರಿಗಣೇಶ ಹಬ್ಬವು ನೀರು ಮತ್ತು ಮಣ್ಣಿನ ಆರಾಧನೆಯಾದರೆ, ದೀಪಾವಳಿಯು ಬೆಳೆದು ನಿಂತ ಸಸ್ಯ ಸಮೃದ್ಧಿಯ ಹಬ್ಬ. ಈ ಸಮೃದ್ಧಿಯ ಸಂಕೇತವಾಗಿ ದೀಪದ ಬೆಳಕು ಸಹ ಪ್ರಧಾನ ಪಾತ್ರ ವಹಿಸುತ್ತದೆ. ಅಲ್ಲಿಂದ ಜನವರಿ ತಿಂಗಳಲ್ಲಿ ವ್ಯವಸಾಯದ ಕೆಲಸಗಳು ಮುಗಿಯುವಲ್ಲಿ ಜನಪದರು ತಮ್ಮ ಬೇಸಾಯ ಚಟುವಟಿಕೆಗಳಿಗೆ ನೆರವಾದ ದನಕರುಗಳ ನೆಪದ ಹಬ್ಬವನ್ನು ಸಂಕ್ರಾಂತಿ ಎಂದು ಕರೆದರೆ, ಬೇಸಿಗೆಯ ನಡುವೆ ಬರುವ ಯುಗಾದಿಯನ್ನು ತಮ್ಮ ವ್ಯವಸಾಯದ ಆರಂಭದ ಕುರುಹಾಗಿ ಹೊನ್ನೇರು